

# ಯೇತಿ ಯಕ್ಷಪ್ರಶ್ನೆ

ತನ್ನ ಕಣ್ಣಳತೆಗೆ ನಿಲುಕದ ಜೀವ–ಲೋಕದ ಬಗ್ಗೆ ಮನುಷ್ಯನ ಕುತೂಹಲ ಇಂದು ನಿನ್ನೆಯದಲ್ಲ. ಮನುಕುಲದ ಇತಿಹಾಸದುದ್ದಕ್ಕೂ ಈ ಕುತೂಹಲ ಹಲವು ರೂಪಗಳಲ್ಲಿ ವ್ಯಕ್ತವಾಗುತ್ತಲೇ ಬಂದಿದೆ. ಅಂಥದೊಂದು ಕೌತುಕ ಯೇತಿ. ಹಿಮಾಲಯದಲ್ಲಿ ಜೀವಿಸಿದೆ ಎನ್ನಲಾದ ಈ ಹಿಮಮಾನವನ ಅಸ್ತಿತ್ವಕ್ಕೆ ಸ್ಪಷ್ಟ ವೈಜ್ಞಾನಿಕ ಪುರಾವೆಗಳು ದೊರೆತಿಲ್ಲವಾದರೂ, ಆಗಾಗ ಕಾಣಿಸುವ ನಿಗೂಢ ಹೆಜ್ಜೆಗುರುತುಗಳ ಮೂಲಕ ಕುತೂಹಲಿಗಳ ಮನಸ್ಸಿನಲ್ಲಿ ಯೇತಿ ಮತ್ತೆ ಮತ್ತೆ ಜೀವ ತಳೆಯುತ್ತಲೇ ಇದೆ. ಈಗ ಭಾರತೀಯ ಸೇನಾ ಅಧಿಕಾರಿಗಳು ಬಿಡುಗಡೆ ಮಾಡಿರುವ ಬೃಹತ್ ಹೆಜ್ಜೆಯ ಫೋಟೊ ಯೇತಿ ನೆನಪುಗಳ ಮರುಕಳಿಕೆಗೆ ಕಾರಣವಾಗಿದೆ. ಕೆದರಿದ ಹೆಜ್ಜೆಯಲ್ಲಿ ಸಾಹಸಿಗರು, ಸಂಶೋಧಕರು, ವಿಜ್ಞಾನಿಗಳು, ಕಥೆಗಾರರು, ಕಲಾವಿದರನ್ನೊಳಗೊಂಡ ಜನಮಾನಸ ಕಂಡಿರುವ ಯೇತಿಯ ಕಥನಗುಚ್ಛ ಸಮೂಹರಚನೆಯ ಒಂದು ಅಪೂರ್ವ ಮಹಾಕಾವ್ಯದಂತಿದೆ.

■ ಮಹತಿ